ಪ್ರಜಾವಾಣಿ




ಚಲನಚಿತ್ರ ನಟ, ನಿರ್ದೇಶಕ ರಕ್ಷಿತ್ ಶೆಟ್ಟಿ ವಿದ್ಯಾರ್ಥಿನಿಯ ಜತೆ ರ‍್ಯಾಂಪ್ ಮೇಲೆ ಹೆಜ್ಜೆ ಹಾಕಿದರು

# ಪಲ್ಸ್ 2014: ನೃತ್ಯ ವೈಭವಕ್ಕೆ ತಾರಾ ಮೆರುಗು

ಸ್ಕೂಲ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಜೈನ್ ವಿಶ್ವವಿದ್ಯಾಲಯ ಇತ್ತೀಚೆಗೆ ಅಂತರ ಕಾಲೇಜು ನೃತ್ಯ ಉತ್ಸವ 'ಪಲ್ಸ್' ಆಯೋಜಿಸಿತ್ತು. ಈ ಉತ್ಸವದಲ್ಲಿ ಕನ್ನಡ ಚಲನಚಿತ್ರದ ನಟನಟಿಯರು ಆಗಮಿಸಿ, ಕಾರ್ಯಕ್ರಮಕ್ಕೆ ತಾರಾಮೆರುಗು ನೀಡಿದರು.

ಬೆಂಗಳೂರು, ಮುಂಬೈ, ಚೆನ್ನೈ ಹಾಗೂ ಪುಣೆಯ 20 ಕಾಲೇಜುಗಳಿಂದ ಬಂದ ವಿದ್ಯಾರ್ಥಿಗಳು ಸೋಲೋ ಹಾಗೂ ಸಮೂಹ ನೃತ್ಯಗಳ ಮೂಲಕ ಕಾರ್ಯಕ್ರಮಕ್ಕೆ ಕಳೆ ತುಂಬಿದರು.

ವಿದ್ಯಾರ್ಥಿಗಳ ಬಿಬೋಯರ್ಸ್, ಪಾಪರ್ಸ್ ಮತ್ತು ಲಾಕರ್ಸ್ ನೃತ್ಯ ಶೈಲಿಗಳು ಪಾಶ್ಚಾತ್ಯ ನೃತ್ಯದ ರಸದೌತಣವನ್ನು ನೆರೆದಿದ್ದ ಪ್ರೇಕ್ಷಕರಿಗೆ ಉಣಬಡಿಸಿದವು. ಪಲ್ಸ್‌ನ ಮೊದಲ ದಿನ ನೀನಾಸಂ ಸತೀಶ್ ಮತ್ತು ಸಿಂಧು ಕಾರ್ಯಕ್ರಮದ ತೀರ್ಪುಗಾರರಾಗಿ ಆಗಮಿಸಿದ್ದರು. ವಿದ್ಯಾರ್ಥಿಗಳ ಒತ್ತಾಯದ ಮೇರೆಗೆ ಸತೀಶ್ ಲೂಸಿಯಾ ಚಿತ್ರದ 'ಜಮ್ಮ ಜಮ್ಮ ಜಮ್ಮ ಜಮ್ಮ ..' ಹಾಡಿಗೆ ದನಿಯಾದರಲ್ಲದೆ, ಜೈನ್ ವಿಶ್ವವಿದ್ಯಾಲಯದ ವಿದ್ಯಾರ್ಥಿಯೊಬ್ಬ ಅದಕ್ಕೆ ಬೀಟ್ ಬಾಕ್ಸಿಂಗ್ ಸಾಥ್ ನೀಡಿ ಪ್ರೇಕ್ಷಕರ ಮನಸೂರೆಗೊಂಡರು.

ಸೋಲೋ ನೃತ್ಯ ವಿಭಾಗದಲ್ಲಿ ಇಮೇಜ್ ಕಾಲೇಜ್ ಆಫ್ ಆರ್ಟ್ಸ್, ಅನಿಮೇಶನ್ ಅಂಡ್ ಟೆಕ್ನಾಲಜಿಯ ಜೀಶಾನ್ ಹಿಪ್ ಹಾಪ್ ಶೈಲಿ ನೃತ್ಯವನ್ನು ಪ್ರದರ್ಶಿಸಿ ಮೊದಲ ಸ್ಥಾನವನ್ನು ಮುಡಿಗೇರಿಸಿಕೊಂಡರೆ, ಜೈನ್ ವಿಶ್ವವಿದ್ಯಾಲಯ ಸೆಂಟರ್ ಫಾರ್ ಮ್ಯಾನೇಜ್‌ಮೆಂಟ್ ಸ್ಟಡೀಸ್‌ನ ಕಾಜಲ್ ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡರು. ಪಿಇಎಸ್‌ನ ಪಲ್ಸ್ ಕ್ರ್ಯೂ, ಸಮೂಹ ನೃತ್ಯದಲ್ಲಿ ಜಯಗಳಿಸುವುದರ ಮೂಲಕ ಬರೋಬ್ಬರಿ ₹ 10,000 ಬಹುಮಾನವನ್ನು ತಮ್ಮದಾಗಿಸಿಕೊಂಡರು. ಅಂತಿಮ ದಿನ ನಟ, ನಿರ್ದೇಶಕ ರಕ್ಷಿತ್ ಶೆಟ್ಟಿ ಹಾಗೂ ಐಶನಿ ಶೆಟ್ಟಿ ಆಗಮಿಸಿ, ಜೈನ್ ವಿಶ್ವವಿದ್ಯಾಲಯದ ಫ್ಯಾಶನ್ ಟೀಂನೊಂದಿಗೆ ಹೆಜ್ಜೆ ಹಾಕಿ, ಕಾರ್ಯಕ್ರಮದ ರಂಗು ಹೆಚ್ಚಿಸಿದರು. ⌘